# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103 ☎ : 0816-2255650, 2273511 ಫ್ಯಾಕ್ಸ್ :0816-2270719

ಸಂಖ್ಯೆ:ತುವಿ: ಪ.ವಿ:ಬಿ.ಇಡಿ.:ಪ.ಶುಲ್ಕ.:2017-18/467 ದಿನಾಂಕ:06.07.2017

## ಅಧಿಸೂಚನೆ

**ವಿಷಯ:** 2017 ರ ಆಗಸ್ಟ್ ಮಾಹೆಯಲ್ಲಿ ನಡೆಯಲಿರುವ ಸ್ನಾತಕ ಶಿಕ್ಷಣ (B.Ed.) ಪದವಿಯ NON-CBCS ಪಠ್ಯಕ್ರಮದ ಪ್ರಥಮ & ದ್ವಿತೀಯ ಸೆಮಿಸ್ಟರ್ (2014-15 ನೇ ಸಾಲಿನಲ್ಲಿ ಪ್ರವೇಶ ಪಡೆದು ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಮಾತ್ರ) ವಿದ್ಯಾರ್ಥಿಗಳಿಂದ ಪರೀಕ್ಷೆಯ ಪರೀಕ್ಷಾ ಶುಲ್ಕ ಪಾವತಿಸುವ ಕುರಿತು.

**ಉಲ್ಲೇಖ :** 1. ಕ.ಸ. ತಿದ್ದುಪಡಿ ಮತ್ತು ಸೇರ್ಪಡೆ ಆದೇಶ ಸಂಖ್ಯೆ : ಹಿಂವಕ 589 ಬಿಎಂಎಸ್ 2013 ದಿನಾಂಕ: 06.08.2014

2. ಕ.ಸ. ಆದೇಶ ಸಂಖ್ಯೆ : ಹಿಂವಕ 589 ಬಿಎಂಎಸ್ 2013 ದಿನಾಂಕ: 05.10.2013
3. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪ್ರಕಟಣೆ ಸಂಖ್ಯೆ / ಹಿಂವಕ/ ವಿವೇ/ಸಿಆರ್-34 /2014-15 ದಿನಾಂಕ: 19.09.2014
4. ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ: 06.07.2017

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2017 ರ ಆಗಸ್ಟ್ ಮಾಹೆಯಲ್ಲಿ ನಡೆಯಲಿರುವ ಸ್ನಾತಕ ಶಿಕ್ಷಣ (B.Ed.) ಪದವಿಯ NON-CBCS ಪಠ್ಯಕ್ರಮದ ಪ್ರಥಮ & ದ್ವಿತೀಯ ಸೆಮಿಸ್ಟರ್ (2014-15 ನೇ ಸಾಲಿನಲ್ಲಿ ಪ್ರವೇಶ ಪಡೆದು ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಮಾತ್ರ) ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳುವುದು.

**ಪರೀಕ್ಷೆಗಳಿಗೆ ಹಾಜರಾಗುವ ಅರ್ಹ ವಿದ್ಯಾರ್ಥಿಗಳ ಶುಲ್ಕದ ವಿವರಗಳನ್ನು ವಿಷಯದೊಂದಿಗೆ ಆನ್‌ಲೈನ್‌ನಲ್ಲಿ ನಮೂದಿಸುವುದು. ಆನ್‌ಲೈನ್ ಪರೀಕ್ಷಾ ಅರ್ಜಿಗಳ ಆಧಾರದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲಿದ್ದು, ಪ್ರತ್ಯೇಕವಾಗಿ ಪ್ರಶ್ನೆ ಪತ್ರಿಕೆ ಕೋರಿಕೆ ಪಟ್ಟಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಆದರೆ ಸಂಬಂಧಿಸಿದ ವಿದ್ಯಾರ್ಥಿಗಳು ಶೈಕ್ಷಣಿಕ ವಿಭಾಗದಿಂದ ಪ್ರವೇಶಾನುಮೋದನೆಯಾದ ವಿಷಯಗಳಿಗೆ / ಪತ್ರಿಕೆಗಳಿಗೆ ಕೋಡ್‌ಗಳನ್ನು ಪರಿಶೀಲಿಸಿ ಆನ್‌ಲೈನ್ ಮೂಲಕ ಪರೀಕ್ಷಾ ಅರ್ಜಿಯನ್ನು ಸಲ್ಲಿಸತಕ್ಕದ್ದು. ಆನ್‌ಲೈನ್ ಪರೀಕ್ಷಾ ಅರ್ಜಿಯಲ್ಲಿ ವಿಷಯ / ಪತ್ರಿಕೆಗಳ ಕೋಡ್‌ನ್ನು ತಪ್ಪಾಗಿ ನಮೂದಿಸಿದಲ್ಲಿ ಈ ಕಾರಣದಿಂದಾಗಿ ಪ್ರಶ್ನೆ ಪತ್ರಿಕೆಯಲ್ಲಿನ ಸರಬರಾಜು ಮಾಡುವುದರಲ್ಲಿ ವ್ಯತ್ಯಾಸವಾದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರನ್ನೇ ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದು.**

**ಶುಲ್ಕ ಪಾವತಿಸಲು ವಿವರವಾದ ದಿನಾಂಕಗಳು ಈ ಕೆಳಗಿನಂತಿವೆ.**

| ಕ್ರಮ ಸಂಖ್ಯೆ | ಶುಲ್ಕದ ವಿವರ | ಕೊನೆಯ ದಿನಾಂಕ |
|---|---|---|
| 1. | ವಿದ್ಯಾರ್ಥಿಗಳಿಗೆ ದಂಡ ರಹಿತ ಶುಲ್ಕ | 20.07.2017 |
| 2. | ವಿದ್ಯಾರ್ಥಿಗಳಿಗೆ ರೂ. 100/- ದಂಡ ಶುಲ್ಕದೊಂದಿಗೆ | 22.07.2017 |
| 3. | ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ನಮೂದಿಸಲು ಕೊನೆಯ ದಿನಾಂಕ | 25.07.2017 |
| 4. | ಕಾಲೇಜಿನವರು ವಿಶ್ವವಿದ್ಯಾನಿಲಯದ ಖಾತೆಗೆ ಪಾವತಿಸಲು ಕೊನೆಯ ದಿನಾಂಕ | 27.07.2017 |

(2 ನೇ ಪುಟಕ್ಕೆ)

| ಕ್ರ.ಸಂ | ಸೆಮಿಸ್ಟರ್ | ಕೋರ್ಸ್ | ಶುಲ್ಕ |
|---|---|---|---|
| | | | ಒಂದು ವಿಷಯಕ್ಕೆ |
| 1. | ಪ್ರಥಮ & ದ್ವಿತೀಯ | ಬಿ.ಇಡಿ., | ರೂ. 100-00 (ಪೂರಕ) |

ಈ ಮೇಲೆ ಸೂಚಿಸಿದ ಪರೀಕ್ಷಾ ಶುಲ್ಕದೊಂದಿಗೆ ಎಲ್ಲಾ ವಿದ್ಯಾರ್ಥಿಗಳು **(ಶುಲ್ಕ ರಿಯಾಯಿತಿ ಪಡೆದ ವಿದ್ಯಾರ್ಥಿಗಳೂ ಸಹ)** ಈ ಕೆಳಗೆ ನಮೂದಿಸಿರುವ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸುವುದು.

| ಕ್ರ.ಸಂ | ಇತರೆ ಶುಲ್ಕಗಳ ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಅಂಕಪಟ್ಟಿ ಶುಲ್ಕ( ಪ್ರತಿ ಸೆಮಿಸ್ಟರ್‌ಗೆ) | 150-00 |
| 2. | ಆನ್‌ಲೈನ್ ಅರ್ಜಿ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | 25-00 |
| 3. | ಅರ್ಜಿ ಪರಿಶೀಲನಾ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | 10-00 |
| 4. | ಪರೀಕ್ಷಾ ಸಿದ್ಧತಾ ಶುಲ್ಕ (Process fee) ( ಪ್ರತಿ ಸೆಮಿಸ್ಟರ್‌ಗೆ) | 35-00 |
| 5. | ಪ್ರಾಯೋಗಿಕ ಪರೀಕ್ಷಾ ಶುಲ್ಕ ( ಒಂದು ವಿಷಯಕ್ಕೆ) | 50-00 |
| 6. | ಮೌಖಿಕ ಸಂದರ್ಶನ (Viva ) ( ಒಂದು ವಿಷಯಕ್ಕೆ) | 150-00 |
| 7. | ಪ್ರಾಜೆಕ್ಟ್ ವ್ಯಾಲ್ಯೂವೇಷನ್ ( Project Evaluation ) ( ಒಂದು ವಿಷಯಕ್ಕೆ) | 100-00 |

ಸಂಬಂಧಿಸಿದ ಶುಲ್ಕವನ್ನು ಮಾತ್ರ ಪಾವತಿಸತಕ್ಕದ್ದು.

*ಅರ್ಜಿ ಪರಿಶೀಲನಾ ಶುಲ್ಕ **ರೂ.10-00** ಗಳಲ್ಲಿ ರೂ. 06-00 ಗಳನ್ನು ಪರೀಕ್ಷಾ ಕೇಂದ್ರದಲ್ಲಿ ಉಳಿಸಿಕೊಂಡು ಉಳಿದ ರೂ.04-00 ಗಳನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡುವುದು.

*ಆನ್‌ಲೈನ್ ಅರ್ಜಿ ಶುಲ್ಕ **ರೂ.25-00** ಗಳಲ್ಲಿ ರೂ.05-00ಗಳನ್ನು ಕಾಲೇಜಿನವರು ಉಳಿಸಿಕೊಂಡು ಉಳಿದ ರೂ.20-00 ಗಳನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡುವುದು.

## ಶುಲ್ಕ ವಿನಾಯಿತಿ

1. **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ: (ಪೂರಕ)**

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಎಲ್ಲಾ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಮಿತಿ **ರೂ.2.50** ಲಕ್ಷದೊಳಗಿದ್ದರೆ ಅಂಥ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಪಡೆಯಲು ಅರ್ಹರಿರುತ್ತಾರೆ.

ವಿಶ್ವವಿದ್ಯಾನಿಲಯದ ನಿಯಮಾನುಸಾರ ಪರೀಕ್ಷಾ ಶುಲ್ಕ ಪಾವತಿಸಲು ಅರ್ಹತೆ ಇಲ್ಲದಿದ್ದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಗಳಿಂದ ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಸ್ವೀಕರಿಸಲು ಹಾಗೂ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

**ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರವನ್ನು ಬದಲಾಯಿಸುವಂತಿಲ್ಲ.**

ವಿಶ್ವವಿದ್ಯಾನಿಲಯದಿಂದ ಅನುಮೋದನೆ ಪಡೆದ ಅರ್ಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ವಿಶ್ವವಿದ್ಯಾನಿಲಯದ ಪರವಾಗಿ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ಸಂಗ್ರಹಿಸಿ, ನಂತರ ಒಟ್ಟು ಶುಲ್ಕವನ್ನು ಕ್ರೋಢೀಕರಿಸಿ ವಿಶ್ವವಿದ್ಯಾನಿಲಯದ ನಿಧಿಗೆ **RTGS/NEFT ಮೂಲಕ ಎಸ್.ಬಿ.ಎಂ ಖಾತೆ ನಂ.54040241380** ಗೆ ಪರೀಕ್ಷಾ ಶುಲ್ಕವನ್ನು **ದಿನಾಂಕ: 27.07.2017 ರೊಳಗೆ ಪಾವತಿಸಿದ ಮೂಲ ಪ್ರತಿಯನ್ನು ಹಣಕಾಸು ವಿಭಾಗಕ್ಕೆ ಹಾಗೂ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಪರೀಕ್ಷಾಂಗ ವಿಭಾಗಕ್ಕೆ ಸಲ್ಲಿಸುವುದು.**

(3 ನೇ ಪುಟಕ್ಕೆ)

**ಪರೀಕ್ಷಾ ಶುಲ್ಕದ ಹಣಕಾಸು ಪಟ್ಟಿಯನ್ನು ದ್ವಿಪ್ರತಿಗಳಲ್ಲಿ ತಪ್ಪದೇ ಸಲ್ಲಿಸುವುದು(ಪರೀಕ್ಷಾಂಗ ವಿಭಾಗಕ್ಕೆ ಒಂದು ಪ್ರತಿ ಮತ್ತು ಹಣಕಾಸು ವಿಭಾಗಕ್ಕೆ ಒಂದು ಪ್ರತಿ).**

ಪ್ರಾಯೋಗಿಕ (Practical) ಪರೀಕ್ಷೆಗಳನ್ನು ಸೈದ್ಧಾಂತಿಕ (Theory) ಪರೀಕ್ಷೆಗಳಿಗಿಂತ ಮೊದಲು ನಡೆಸತಕ್ಕದ್ದು. ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ಪರೀಕ್ಷಾ ಅಧೀಕ್ಷಕರು ಸಿದ್ಧಪಡಿಸಿ ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಲ್ಲಿ ಪ್ರಕಟಿಸುವುದು ಮತ್ತು ಅದರ ಒಂದು ಪ್ರತಿಯನ್ನು **ಕುಲಸಚಿವರು(ಮೌಲ್ಯಮಾಪನ)** ಇವರಿಗೆ ಸಲ್ಲಿಸುವುದು.

ಸೈದ್ಧಾಂತಿಕ(ಪಠ್ಯ ವಿಷಯ) ಪರೀಕ್ಷೆಗಳ ವಿವರಗಳನ್ನೊಳಗೊಂಡ ವೇಳಾಪಟ್ಟಿಯನ್ನು ಮುಂದೆ ಪ್ರಕಟಿಸಲಾಗುವುದು.

ಎಲ್ಲಾ ಪ್ರಾಂಶುಪಾಲರುಗಳು ಸಹಕರಿಸಬೇಕಾಗಿ ಕೋರಲಾಗಿದೆ.

**ವಿಶೇಷ ಸೂಚನೆ:**

ತುಮಕೂರು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟ ಕಾಲೇಜುಗಳು ಮಾತ್ರ ಪರೀಕ್ಷಾ ಶುಲ್ಕವನ್ನು ಅರ್ಹ ವಿದ್ಯಾರ್ಥಿಗಳಿಂದ ಪಾವತಿಸಿಕೊಳ್ಳುವುದು.

**ಕುಲಸಚಿವರು(ಮೌಲ್ಯಮಾಪನ)**

ಗೆ,

**ಪ್ರಾಂಶುಪಾಲರು, ಸಂಯೋಜಿತ ಸ್ನಾತಕ ಶಿಕ್ಷಣ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**

**ಪ್ರತಿಗಳು:**

1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಎಂ.ಎಸ್. ಬಿಲ್ಡಿಂಗ್-2, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.
2. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕುಲಸಚಿವರ ಆಪ್ತಕಾರ್ಯಾಲಯ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಫಲಿತಾಂಶ ಗಣಕೀಕರಣ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.(ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು)
8. ಕಛೇರಿ ಪ್ರತಿ.